ನಿವೇದನೆ

# ಹಬ್ಬಗಳ ಹಣತೆಸಾಲಿನ ಬೆಳಕಿನಲ್ಲಿ ಸಾಧ್ಯವಾಗಲಿ ಮಾನವೀಯ ಸಂವಾದ

**ಹಬ್ಬದ ಸಂಭ್ರಮವೊಂದು ಕೊನೆಗೊಂಡಿತು ಎನ್ನುವುದರಲ್ಲೇ ಮನೆಯಂಗಳದಲ್ಲಿ ಮತ್ತೊಂದು ಹಬ್ಬದ ಹೂ. ಆದರೆ, ಈ ಬಾರಿಯ ಹಬ್ಬಗಳ ಋತು ಹಿಂದಿನಂತಿಲ್ಲ. ನಮ್ಮ ಜೀವನಪದ್ಧತಿಯನ್ನೇ ಬದಲಿಸಿಕೊಳ್ಳಲು ಕಾರಣವಾಗಿರುವ ಕೊರೊನಾ ಹಬ್ಬಗಳ ಆಚರಣೆಯ ಬದಲಾವಣೆಗೂ ಒತ್ತಾಯಿಸುತ್ತಿದೆ.**

ದೈವಾರಾಧನೆಯ ರೂಪದಲ್ಲಿ ಕಾಣಿಸಿಕೊಳ್ಳುವ ಹಬ್ಬಗಳಿಗೆ ಸಾಂಸ್ಕೃತಿಕ ಆಯಾಮಗಳೂ ಇವೆ. ಹಬ್ಬದ ವಿಧಿವಿಧಾನಗಳನ್ನು ನೆನಪಿಸಿಕೊಳ್ಳಿ. ಹಬ್ಬದ ಕಾರಣದಿಂದಾಗಿ ಮನೆ ಚೊಕ್ಕಟವಾಗುತ್ತದೆ, ಸಿಂಗರಗೊಳ್ಳುತ್ತದೆ. ಅಂಗಳದಲ್ಲಿ ಬಣ್ಣಬಣ್ಣದ ರಂಗವಲ್ಲಿ. ಅಡುಗೆಮನೆಯಲ್ಲಿ ವಿಶೇಷ ಖಾದ್ಯಗಳ ಘಮ. ಮನೆಮಂದಿಗೆಲ್ಲ ಹೊಸ ಬಟ್ಟೆ. ರಂಜನೆಯ ಕಾರಣಕ್ಕಾಗಿ ಆಟೋಟಗಳ ಚಟುವಟಿಕೆ ಹಾಗೂ ಹರಟೆ. ಹೀಗೆ ಹಬ್ಬವೊಂದರ ಜೊತೆಗೆ ತಳಕು ಹಾಕಿಕೊಂಡ ಹಲವು ಸಂಗತಿಗಳನ್ನು ಗಮನಿಸಿದರೆ, ಹಬ್ಬವನ್ನು ಕೇವಲ ಧಾರ್ಮಿಕ ಚಟುವಟಿಕೆ ಎನ್ನಲಿಕ್ಕಾಗದು. ಧಾರ್ಮಿಕ ಚಟುವಟಿಕೆಯಷ್ಟೇ ಆಗಿರುವ ಯಾವ ಹಬ್ಬವೂ ಜನಸಮೂಹದ ನಡುವೆ ದೀರ್ಘಕಾಲ ಉಳಿಯುವುದು ಸಾಧ್ಯವಿಲ್ಲ. ಕೆಲವು ಹಬ್ಬಗಳೊಂದಿಗೆ ಮೂಢನಂಬಿಕೆಗಳು ತಳಕು ಹಾಕಿಕೊಂಡಿದ್ದರೂ, ಕಾಲಘಟ್ಟದಲ್ಲವು ಅಪ್ರಸ್ತುತವಾಗುತ್ತಾ ಬಂದಿವೆ. ಸಾಂಸ್ಕೃತಿಕ ಸಂಗತಿಗಳ ಕಾರಣದಿಂದಾಗಿಯೇ ಹಬ್ಬವೆನ್ನುವುದು ಎಲ್ಲರನ್ನೂ ಒಳಗೊಳ್ಳುವ ಸಂಭ್ರಮವಾಗಿದೆ.

ಹಬ್ಬಕ್ಕೂ ಕಲಾಪ್ರಕಾರಗಳಿಗೂ ಇರುವ ಸಂಬಂಧ ಅನನ್ಯವಾದುದು. ಸಂಗೀತ, ಚಿತ್ರಕಲೆ, ನೃತ್ಯ, ನಾಟಕಗಳಂತಹ ಕಲಾಪ್ರಕಾರಗಳು ಹಬ್ಬಗಳ ಭಾಗಗಳೇ ಆಗಿವೆ. ಕೆಲವು ಧಾರ್ಮಿಕ ಆಚರಣೆಗಳಂತೂ ಜನಪದ ಕಲಾಪ್ರಕಾರಗಳಿಗೆ ಜೀವಪೋಷಕವಾಗಿವೆ. ಹಬ್ಬಕ್ಕೆ ಪರಿಸರಪ್ರೇಮದ ಆಯಾಮವೂ ಇದೆ. ಬಹುತೇಕ ಹಬ್ಬಗಳು ಋತುವಿಶೇಷಕ್ಕೆ ತಕ್ಕಂತೆ ರೂಪುಗೊಂಡಿರುವುದನ್ನು ಗಮನಿಸಿದರೆ, ನಮ್ಮ ಆಚರಣೆಗಳು ಪ್ರಕೃತಿಯೊಂದಿಗೆ ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿವೆ ಎನ್ನುವುದನ್ನು ತಿಳಿಯಬಹುದು. ಸಂಕ್ರಾಂತಿ ಹಬ್ಬ ಸುಗ್ಗಿಯ ಸಂಭ್ರಮ ಹಾಗೂ ಸೂರ್ಯನ ಪಥ ಬದಲಾವಣೆಯ ಸಂದರ್ಭ. ಪ್ರಕೃತಿಯ ಹೊಸಹುಟ್ಟನ್ನು ಹೊಸ ಸಂವತ್ಸರದ ರೂಪದಲ್ಲಿ ಆಚರಿಸುವ ಹಬ್ಬ ಯುಗಾದಿ. ಹೀಗೆ, ಬಿಸಿಲು, ಮಳೆ, ಚಳಿಗಳಿಗೆ ತಕ್ಕಂತೆ ಹಬ್ಬದ ವಿಧಿವಿಧಾನಗಳೂ ಆಹಾರಖಾದ್ಯಗಳೂ ಇವೆ.

ಮುಂಗಾರು ಚುರುಕಾಗುವುದರೊಂದಿಗೆ ಆರಂಭವಾಗಿರುವ ಶ್ರಾವಣ ಹಬ್ಬಗಳ ಪರ್ವಕಾಲದ ಸಂದರ್ಭ. ಸಂಭ್ರಮವೊಂದು ಕೊನೆಗೊಂಡಿತು ಎನ್ನುವುದರಲ್ಲೇ ಮತ್ತೊಂದು ಹಬ್ಬದ ಹೂ ಮನೆಯಂಗಳದಲ್ಲಿ ಅರಳುತ್ತಿರುತ್ತದೆ. ಆದರೆ, ಈ ಬಾರಿಯ ಹಬ್ಬಗಳ ಋತು ಹಿಂದಿನಂತಿಲ್ಲ. ನಮ್ಮ ಜೀವನಪದ್ಧತಿ ಹಾಗೂ ಯೋಚನೆಗಳನ್ನೇ ಬದಲಿಸಿಕೊಳ್ಳಲು ಕಾರಣವಾಗಿರುವ ಕೊರೊನಾ ವೈರಾಣು ಹಬ್ಬಗಳ ಆಚರಣೆಯ ಬದಲಾವಣೆಗೂ ಒತ್ತಾಯಿಸುತ್ತಿದೆ. ಸಂಕಟದ ಸಮಯವೆಂದು ಹಬ್ಬಗಳಿಂದ ದೂರವಿರಬೇಕಿಲ್ಲ. ಆಚರಣೆಯ ವಿಧಾನಗಳು ಬದಲಾಗಬೇಕಷ್ಟೆ.

ಬೇರೆ ಬೇರೆ ದಾರಿಗಳನ್ನು ಆರಿಸಿಕೊಂಡ ಕುಟುಂಬದ ಕರುಳಬಳ್ಳಿಗಳು ಹಬ್ಬದ ನೆಪದಲ್ಲಿ ಒಂದೆಡೆ ಸೇರುತ್ತವೆ; ಸಂಬಂಧಗಳು ನವೀಕರಣಗೊಳ್ಳುತ್ತವೆ. ಕುಟುಂಬವಷ್ಟೇ ಅಲ್ಲ, ಹಬ್ಬದ ಆಚರಣೆಯಲ್ಲಿ ಊರು ಕೂಡ ಒಂದಾಗುತ್ತದೆ; ಸಂಭ್ರಮವೇ ತೇರಾಗುತ್ತದೆ. ಆದರೆ, ಪ್ರಸಕ್ತ ಸಂದರ್ಭ ಹಬ್ಬಗಳ ಸಾಮೂಹಿಕ ಆಚರಣೆಯನ್ನು ಬಯಸುತ್ತಿಲ್ಲ. ಇದ್ದಲ್ಲಿಯೇ ಹಬ್ಬಗಳನ್ನು ಆಚರಿಸಬೇಕಾದ ತುರ್ತು ಇಂದಿನದು. ಜನಜಂಗುಳಿ ಸೇರಬಾರದು ಎನ್ನುವ ಕಾರಣದಿಂದಲೇ ಸಾವಿರ–ಲಕ್ಷ ಸಂಖ್ಯೆಯಲ್ಲಿ ಭಕ್ತರು ಸೇರುವ ರಥೋತ್ಸವಗಳನ್ನು ರದ್ದುಪಡಿಸಲಾಗಿದೆ ಇಲ್ಲವೇ ಸಾಂಕೇತಿಕವಾಗಿ ಆಚರಿಸಲಾಗುತ್ತಿದೆ. ಈ ಸಾಂಕೇತಿಕ ಆಚರಣೆ ಹಬ್ಬಗಳಿಗೂ ಅನ್ವಯಿಸುವಂತಹದ್ದು.

ಇತ್ತೀಚಿನ ವರ್ಷಗಳಲ್ಲಿ ಕೆಲವು ಹಬ್ಬಗಳಿಗೆ ಪೇಟೆಯ ರಂಗು ಆವರಿಸಿಕೊಂಡಿದೆ. ಸಮೃದ್ಧಿ–ಸಂತೃಪ್ತಿಯ ಸಂದರ್ಭದಲ್ಲಿ ಆ ವೈಭವವನ್ನು ಸಹನೀಯ ಎನ್ನಬಹುದೇನೊ? ಆದರೆ, ವೈರಸ್‌ನ ಸೋಂಕಿನ ಆತಂಕದ ಸಂದರ್ಭದಲ್ಲಿ ಹಬ್ಬ ಸರಳಗೊಳ್ಳಲೇಬೇಕಾಗಿದೆ. ಹಬ್ಬಗಳು ವೈಯಕ್ತಿಕ ಹಾಗೂ ಸಾಮಾಜಿಕ ಸಂತೋಷಕ್ಕೆ ಕಾರಣವಾಗಬೇಕೇ ಹೊರತು, ರೋಗಕಾರಕಗಳಾಗದಂತೆ ಎಚ್ಚರ ವಹಿಸಬೇಕಾಗಿದೆ. ವೈರಸ್‌ನಿಂದ ದೂರವಿರುವುದಕ್ಕಾಗಿ ಮುಖಕ್ಕೆ ಬಟ್ಟೆ ಕಟ್ಟಿಕೊಳ್ಳುತ್ತೇವೆ. ಇದೇ ಸಂದರ್ಭದಲ್ಲಿ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ನಮ್ಮ ಭಾವ–ಬುದ್ಧಿಗೆ ಕವಿದಿರಬಹುದಾದ ಪೊರೆಯನ್ನು ನಿವಾರಿಸಿಕೊಳ್ಳಬೇಕಾಗಿದೆ. ಆ ಪೊರೆಯ ನಿವಾರಣೆಯಾದರೆ ಹಬ್ಬಗಳೊಂದಿಗೆ ಸೇರಿಕೊಂಡಿರುವ ಅನಗತ್ಯ ಬೊಜ್ಜು ಕರಗುತ್ತದೆ. ಆಡಂಬರದ ಜಾಗದಲ್ಲಿ ಅರ್ಥಪೂರ್ಣ ಆಚರಣೆ ಸಾಧ್ಯವಾಗುತ್ತದೆ. ಪ್ರದರ್ಶನಪ್ರಿಯತೆ ಹಿಂದಕ್ಕೆ ಸರಿದು ಅಂತರಂಗಶುದ್ಧಿಗೆ ಹಬ್ಬ ಪ್ರೇರಣೆಯಾಗುತ್ತದೆ.

ನಮ್ಮೆಲ್ಲ ಹಬ್ಬಗಳ ಹಿನ್ನೆಲೆಯಲ್ಲೂ ಧಾರ್ಮಿಕ ಆವರಣವೊಂದು ಇದ್ದೇ ಇರುತ್ತದೆ. ಆ ದೈವಕೇಂದ್ರಿತ ಆವರಣ ಮಾನವಕೇಂದ್ರಿತವಾಗುವ ನಿಟ್ಟಿನಲ್ಲಿ ನಮ್ಮ ಈ ಹೊತ್ತಿನ ಹಬ್ಬಗಳನ್ನು ಆಚರಿಸಬೇಕಾಗಿದೆ. 'ದಯೆಯೇ ಧರ್ಮದ ಮೂಲ' ಎನ್ನುತ್ತಾರೆ ಬಸವಣ್ಣ. ಹಂಚಿಕೊಂಡು ತಿನ್ನಬೇಕು ಎನ್ನುತ್ತದೆ ಭಾರತೀಯ ಸಂಸ್ಕೃತಿ. ಈ ದಯೆ ಹಾಗೂ ಹಂಚಿಕೊಂಡಷ್ಟೂ ಹೆಚ್ಚುವ ಸಂಭ್ರಮವನ್ನು ಹಬ್ಬಗಳ ಭಾಗವಾಗಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಮಾಡಬೇಕಾದುದಿಷ್ಟೇ – ನಮ್ಮ ಸುತ್ತಮುತ್ತ ಇರುವ ಜನಸಾಮಾನ್ಯರನ್ನು ಗಮನಿಸುವುದು. ಆ ನೋಟವೇ ನಮ್ಮ ಹಬ್ಬದ ಆಚರಣೆಯು ಯಾವ ರೀತಿಯಲ್ಲಿರಬೇಕು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಹಬ್ಬ ಎನ್ನುವಂತಹದ್ದು ಸಿರಿವಂತಿಕೆಯ ಪ್ರದರ್ಶನವಾಗಬಾರದು; ಅದು ಅಂತಃಕರಣದ ಕನ್ನಡಿಯಾಗಬೇಕು; ಮಾನವೀಯತೆಯ ಹಣತೆಯಾಗಬೇಕು.

■ ರಘುನಾಥ ಚ.ಹ.

